

ಅಷ್ಟು ಮಾತ್ರವಲ್ಲ, ಸ್ಪರ್ಧಾತ್ಮಕ ಜೀವನದ ಮೊದಲ ಪರಿಚಯವನ್ನೂ ಮಾಡಿಸುತ್ತವೆ. ಪಿಯುಸಿಯದು ಮತ್ತೂ ನಿರ್ಣಾಯಕ ಹಂತ. ಎಸ್ಎಸ್ಎಲ್‌ಸಿ ನಂತರದಲ್ಲಿ ವಿಜ್ಞಾನ, ವಾಣಿಜ್ಯ, ಕಲಾ ವಿಭಾಗಗಳಲ್ಲಿ ಯಾವುದಾದರೊಂದನ್ನು ವಿದ್ಯಾರ್ಥಿಗಳು ಆರಿಸಿಕೊಂಡಿರುತ್ತಾರೆ. ಆ ಆಯ್ಕೆ ಮತ್ತು ಗುರಿ ಹೆಚ್ಚು ಸ್ಪಷ್ಟವಾಗುವುದು ಪಿಯುಸಿ ಫಲಿತಾಂಶವನ್ನು ಆಧರಿಸಿಯೇ. ಇಂದಿನ ವಿದ್ಯಾರ್ಥಿಯ ನಾಳೆಯ ವೃತ್ತಿ ಯಾವುದೆನ್ನುವುದನ್ನು ಬಹುತೇಕ ಸಂದರ್ಭಗಳಲ್ಲಿ ಪಿಯುಸಿ ಫಲಿತಾಂಶವೇ ನಿರ್ಧರಿಸುತ್ತದೆ. ಹಾಗಾಗಿ, ಪಿಯುಸಿಯಲ್ಲಿ ಪಡೆಯುವ ಅಂಕಗಳಿಗೆ ಇನ್ನಿಲ್ಲದ ಮಹತ್ವವಿದೆ. ಪಿಯುಸಿ ಮಾತ್ರವಲ್ಲ – ನಂತರದ 'ಸಿಇಟಿ', 'ನೀಟ್'ನಂಥ ಅರ್ಹತಾ ಪರೀಕ್ಷೆಗಳೂ ವಿದ್ಯಾರ್ಥಿ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಪಿಯುಸಿ ಅವಧಿ ಎಂದರೆ, ವಿಜ್ಞಾನದ ವಿದ್ಯಾರ್ಥಿಗಳ ಪಾಲಿಗದು, ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲನ್ನು ಎದುರಿಸಲು ಸಜ್ಜುಗೊಳ್ಳುವ ಅವಧಿಯೂ ಹೌದು.

ಶೈಕ್ಷಣಿಕ ಜೀವನದ ನಿರ್ಣಾಯಕ ಪರೀಕ್ಷೆಗಳಾಗಿರುವ ಕಾರಣದಿಂದಲೇ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಅವಧಿಯ ಸಂದರ್ಭದಲ್ಲಿ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು ಹೆಚ್ಚು ಗಂಭೀರರಾಗಿರುತ್ತಾರೆ. ಅವರೆಗಿನ ಹತ್ತು ಹನ್ನೆರಡು ವರ್ಷಗಳ ಅವಧಿಯ ಹುಡುಗಾಟಿಕೆಯನ್ನು ಬದಿಗಿಟ್ಟು, ವಿದ್ಯಾರ್ಥಿಗಳನ್ನು 'ಓಟದ ಕುದುರೆ'ಗಳಂತೆ ಪರೀಕ್ಷೆಗಳಿಗೆ ಸಜ್ಜುಗೊಳಿಸಲು ವಿದ್ಯಾಸಂಸ್ಥೆಗಳು ಪ್ರಯತ್ನಿಸುತ್ತವೆ. ಹಾಗಾದರೆ, ಹೆಚ್ಚು ಅಂಕ ಗಳಿಸುವುದು ಹೇಗೆ? ಈ ಪ್ರಶ್ನೆಗೆ ಸರಳ ಉತ್ತರ: ಉತ್ತಮ ಪ್ರಯತ್ನವೇ ಉತ್ತಮ ಫಲಿತಾಂಶಕ್ಕೆ ಕೀಲಿಕೈ. ಆದರೆ, ಬರಿಯ ಪ್ರಯತ್ನವಷ್ಟೇ ಯಶಸ್ಸಿಗೆ ಸಾಕಾಗುವುದಿಲ್ಲ. ಹೆಚ್ಚಿನ ಅಂಕಗಳನ್ನು ಪಡೆಯುವುದಕ್ಕೆ ಯೋಜನಾಬದ್ಧ ಪ್ರಯತ್ನ ಅಗತ್ಯ.

ಸಮಾನ ಶಾಲೆ, ಸಮಾನ ಪಾಠದಲ್ಲಿಯೂ ಪೈಪೋಟಿಯ ಫಲಿತಾಂಶದ ಏರುಪೇರು ಸಾಮಾನ್ಯ. ಹಾಗಾದರೆ ವಿದ್ಯಾರ್ಥಿ ಒಬ್ಬ ಸ್ಪರ್ಧಾಳುವಾಗಿ ಹೆಚ್ಚು ಅಂಕಗಳಿಸಲು ಏನು ಮಾಡಬೇಕು? ಪರಿಣಾಮಕಾರಿ ಓದನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬ ಅಂಶವನ್ನು ಅರಿಯುವುದು ತುಂಬ ಅಗತ್ಯ.

ಹೆಚ್ಚು ಅಂಕ ಗಳಿಸಲಿಕ್ಕೆ ಏನೆಲ್ಲ ಅಗತ್ಯ ಎನ್ನುವುದನ್ನು ಹಂತ ಹಂತವಾಗಿ ನೋಡೋಣ.

## ಉತ್ತಮ ಶೈಕ್ಷಣಿಕ ವಾತಾವರಣ

ಒಬ್ಬ ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿಗೆ ಅತ್ಯುತ್ತಮ ಶೈಕ್ಷಣಿಕ ವಾತಾವರಣ ಅವಶ್ಯಕ. ಅದು ಸರ್ಕಾರಿ ಅಥವಾ ಖಾಸಗಿಯದ್ದೇ ಆದರೂ ಅಲ್ಲಿನ ವಾತಾವರಣವೇ ಓದಲು ಪ್ರೇರಣೆ. ಅಂತಹ ಪರಿಸರವನ್ನು ವಿದ್ಯಾರ್ಥಿಗಳಿಗೆ ಒದಗಿಸುವಲ್ಲಿ ಅಧ್ಯಾಪಕರು–ಪಾಲಕರ ಪಾತ್ರ ಮುಖ್ಯವಾದುದು. ಎಲ್ಲಾ ವಿಷಯಗಳ ಬೋಧನೆಗೆ ಸಮಾನ ಪ್ರಾಶಸ್ತ್ಯ ನೀಡಬೇಕು. ಕಾಲಕಾಲಕ್ಕೆ ಸರಿ ತಪ್ಪುಗಳ